4) ಕರಡು ನಿಯಮಗಳನ್ನು ರಚಿಸಿದ್ದು ಆಕ್ಷೇಪಣೆಯನ್ನು ಆಹ್ವಾನಿಸಲಾಗಿದೆ.

ಬಯಲು ಸೀಮೆ ಅಭಿವೃದ್ಧಿ ಮಂಡಲಿ ಕುರಿತು

1949.(2186) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕೃಷಿ ಸಂಸ್ಕರಣೆ ಮತ್ತು ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಯಲು ಸೀಮೇ ಅಭಿವೃದ್ಧಿ ಮಂಡಳಿ ಯಾವಾಗ ಅಸ್ತಿತ್ವಕ್ಕೆ ಬಂದಿತು.

ಆ) ಸದರಿ ಮಂಡಳಿಗೆ ಇದುವರೆಗೂ ಸರ್ಕಾರ ನೀಡಿರುವ ಹಣವೆಷ್ಟು?

ಇ) ಸರ್ಕಾರ ನೀಡಿದ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಲಾಗಿದೆಯೇ.

ಈ) ಇಲ್ಲದಿದ್ದಲ್ಲಿ ಕಾರಣವೇನು?

ಉ) ಸದರಿ ಮಂಡಳಿಯು ಇಲ್ಲಯವರೆಗೆ ಕೈಗೊಂಡ ಕಾರ್ಯಕ್ರಮಗಳೇನು?

ಊ) ಸದರಿ ಮಂಡಳಿಯನ್ನು ಮುಚ್ಚುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಶ್ರೀ ಜಿ.ರಾಜುಗೌಡ (ಕೃಷಿ ಸಂಸ್ಕರಣೆ ಮತ್ತು ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂತ್ರಿಗಳು) :

ಅ) 26-10-95ರಿಂದ ಅಸ್ತಿತ್ವಕ್ಕೆ ಬಂದಿದೆ

ಆ) 46.07 ಕೋಟಿ ರೂ.ಗಳು

ಇ) 33.80 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) ಹಿಂದಿನ ಸಾಲುಗಳಲ್ಲಿ ಖರ್ಚು ಮಾಡದೇ ಉಳಿದ ಹಣವನ್ನು ಮುಂದಿನ ಸಾಲುಗಳಲ್ಲಿ ಖರ್ಚು ಮಾಡಲು ಮಂಡಳಿಗೆ ಅಧಿಕಾರವನ್ನು ನೀಡಲಾಗಿದೆ. ಆದುದರಿಂದ ಕಾಮಗಾರಿಯ ಪ್ರಗತಿಯನ್ನಾಧರಿಸಿ ಹಣವನ್ನು ಖರ್ಚು ಮಾಡಲಾಗುವುದು.

ಉ) ಕಟ್ಟಡ, ರಸ್ತೆ, ಸೇತುವೆ, ಕೆರೆ ಅಭಿವೃದ್ಧಿ ಚೆಕ್ ಡ್ಯಾಂ ನಾಲಾಬದು ಬಂದಾರು ಇತ್ಯಾದಿ ಕಾರ್ಯಕ್ರಮಗಳು

ಊ) ಸದ್ಯಕ್ಕೆ ಇಲ್ಲ.

ರಾಜ್ಯದ ಪ್ರಾವಾಸಿ ತಾಣದ ಅಭಿವೃದ್ಧಿಗಾಗಿ ಕೇಂದ್ರಕ್ಕೆ ಸಲ್ಲಿಸಿರುವ ಪ್ರಸ್ತಾವ

1950 (2354) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸಿ ತಾಣದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಪ್ರಸ್ತಾವ ಸಲ್ಲಿಸಿದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ, ಯಾವ ಯಾವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಸೂಚಿಸಲಾಗಿದೆ ಹಾಗೂ ಎಷ್ಟು ಮೊತ್ತವನ್ನು ಕೇಳಲಾಗಿದೆ?

ಇ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲ ಹಾಗೂ ಶ್ರೀ ಕ್ಷೇತ್ರ ತೆನಿಕೊಳ್ಳ ಪ್ರವಾಸಿ ತಾಣಗಳನ್ನು ಸಹ ಅಭಿವೃದ್ಧಿಪಡಿಸುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೇ?